ಸಿ.ಎಮ್.ಸಿ.42/2018 , ಪಿಡಬ್ಲ್ಯು.1

ದಿಃ 19.06.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು**

ನಾನು ಪಿಯುಸಿ ವರೆಗೂ ವ್ಯಾಸಂಗ ಮಾಡಿದ್ದೇನೆ. ಪ್ರಮಾಣ ಪತ್ರವನ್ನು ಓದಿ ತಿಳಿದುಕೊಂಡಿದ್ದೇನೆ. ಈಗ ನಾನು ರಾಯದುರ್ಗಪಲ್ಲಿಯಲ್ಲಿ ವಾಸವಾಗಿದ್ದೇನೆ. ಮನೆಯಲ್ಲಿ ನಾನು ನನ್ನ ಅತ್ತೆ, ಮಾವಾ ಮತ್ತು ಭಾವ ಅವರ ಹೆಂಡತಿ ವಾಸವಾಗಿದ್ದೇವೆ. ನಮ್ಮ ಕುಟುಂಬದಲ್ಲಿ ಒಟ್ಟು 10 ಜನ ಇದ್ದೇವೆ. ನನ್ನ ಗಂಡನ ಅಣ್ಣ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ. ನನ್ನ ಗಂಡ ನನ್ನ ಜೊತೆಗೆ ಇದ್ದಾರೆ ಎಂದರೆ, ಮನೆ ಬಿಟ್ಟು ಹೋಗಿ 8 ವರ್ಷಗಳಾಗಿರುತ್ತದೆ.

2. 8 ವರ್ಷಗಳಿಂದ ನನ್ನ ಗಂಡ ಮತ್ತು ನನ್ನ ಮಕ್ಕಳನ್ನು ನಿರ್ಲಕ್ಷ್ಯ ಮಾಡಿರುತ್ತಾರೆ. ಅದಕ್ಕೂ ಮೊದಲು ನಮ್ಮನ್ನು ನಿರ್ಲಕ್ಷ್ಯ ಮಾಡಿಲ್ಲ. ನನ್ನ ಅತ್ತೆ ಮಾವಾ ಕೂಡ ನಮ್ಮನ್ನು ಜವಾಬ್ದಾರಿ ತೆಗೆದುಕೊಂಡಿರುತ್ತಾರೆ. ಆಗ ನನ್ನ ಗಂಡ ಜೊತೆಯಲ್ಲಿ ಇದ್ದರು ಎಂದರೆ ಸರಿ. 2011 ರಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ ಕಂಡಕ್ಟರ್ ಆಗಿ ಕೆಲಸಕ್ಕೆ ಸೇರಿಕೊಂಡಿರುತ್ತಾರೆ. ನನ್ನ ಗಂಡ ನನ್ನ ಸೋದರ ಅತ್ತೆ ಮಗ ಎಂದರೆ ಸರಿ.

3. ಒತ್ತಾಯ ಪೂರ್ವಕವಾಗಿ ನನ್ನ ಗಂಡ ಮದುವೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಇಷ್ಟ ಪಟ್ಟು ಮದುವೆ ಮಾಡಿಕೊಂಡಿರುತ್ತಾರೆ. ಗಂಡನ ಜೊತೆ ಹೊಂದಾಣಿಕೆಯಿಂದ ನಾನು ಸಂಸಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ಕೆಲವು ಪಂಚಾಯಿತಿಗಳು ನಡೆದಿರುತ್ತವೆ ಎಂದರೆ ಸರಿಯಲ್ಲ. ಪುನಃ ಪುನಃ ನಾನು, ಹೇಳದೆ ಕೇಳದೆ ನಾನು ತವರು ಮನೆಗೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ.

4. ನನ್ನ ದೊಡ್ಡ ಮಗ 7 ನೇ ತರಗತಿ ಮತ್ತು 2 ನೇ ಮಗ 4 ನೇ ತರಗತಿಯಲ್ಲಿ ಓದುತ್ತಿದ್ದಾರೆ. ನನ್ನ ಗಂಡನನ್ನು ಕರೆದುಕೊಂಡು ಬರುವ ಪ್ರಯತ್ನ ಮಾಡಿರುತ್ತೇನೆ. ಒಬ್ಬ ಮಗನ ವಿಧ್ಯಾಭ್ಯಾಸಕ್ಕೆ 1 ವರ್ಷಕ್ಕೆ 25,000/- ರೂ. ಬೇಕಾಗಿರುತ್ತದೆ. ಖರ್ಚಿಗೆ

ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸಿಲ್ಲ, ಹಾಜರುಪಡಿಸುತ್ತೇನೆ. ನನ್ನ ಗಂಡನ ಸಂಬಳ ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಸುಳ್ಳು ಖರ್ಚು-ವೆಚ್ಚವನ್ನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಅನೈತಿಕ ಸಂಬಂಧ ಇಟ್ಟು ಕೊಂಡಿಲ್ಲ ಎಂದರೆ ಸರಿಯಲ್ಲ.

5. 8 ವರ್ಷದ ಹಿಂದೆ ನನ್ನನ್ನು ಮನೆಯಿಂದ ಹೊರಗೆ ಹಾಕಿರುತ್ತಾರೆ. ದಿನಾಂಕ ಹೇಳಲಾಗುವುದಿಲ್ಲ. ವಿಭಾಗ ಕೋರಿ ನನ್ನ ಗಂಡ ನನ್ನ ಮಾವನ ವಿರುದ್ಧ ದಾವೆ ದಾಖಲಿಸಿರುವುದರಿಂದ ನನ್ನ ಅತ್ತೆ ಮಾವನ ಪ್ರಚೋದನೆ ಮೇರೆಗೆ ಈ ಕೇಸ್ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಕುಟುಂಬದ ಆಸ್ತಿ ವಿಭಾಗವಾಗಿರುವುದಿಲ್ಲ. ವ್ಯವಸಾಯದ ಆದಾಯದಲ್ಲಿ ನನ್ನ ಗಂಡ ಹಣ ತೆಗೆದುಕೊಂಡು ಹೋಗುತ್ತಿದ್ದರಾ ಎಂದರೆ ವ್ಯವಸಾಯದಿಂದ ಹೆಚ್ಚು ಹಣ ಬರುತ್ತಿರಲಿಲ್ಲ. ಅದು ನಮಗೆ ಸಾಲುತ್ತಿರಲಿಲ್ಲ.

6. ಕುಟುಂಬದ ಜಮೀನಿನಲ್ಲಿ ಟೋಮೆಟೋ ಇತ್ಯಾದಿ ತರಕಾರಿಗಳನ್ನು ಬೆಳೆಯುತ್ತಿದ್ದು ಅದರಿಂದ ಬರುವ ಹಣವನ್ನು ಕುಟುಂಬದ ನಿರ್ವಹಣೆಗೆ ನನ್ನ ಗಂಡ ಬಿಡುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಆದಾಯ ಕಡಿಮೆ ಬರುತ್ತಿತ್ತು. ನಮ್ಮ ಕುಟುಂಬಕ್ಕೆ ಎಷ್ಟು ಆಸ್ತಿ ಇವೆ ಎಂದು ಹೇಳಲಾಗುವುದಿಲ್ಲ. ಒಟ್ಟು ನಮಗೆ 12 ಎಕರೆ ಆಸ್ತಿ ಇದ್ದು, ಅದನ್ನು ನಮಗೆ ಬಿಟ್ಟಿದ್ದಾರೆ ಎಂದರೆ ಒಟ್ಟು ಕುಟುಂಬಕ್ಕೆ ಬಿಟ್ಟಿದ್ದಾರೆ.

7. ನನ್ನ ಗಂಡನ ಪಾಲಿನ ಆದಾಯವನ್ನು ನಮಗೆ ಬಿಟ್ಟಿದ್ದಾರೆ ಎಂದರೆ ಜಮೀನು ಭಾಗವಾಗಿರುವುದಿಲ್ಲ. ನಾನು ಯಾವಾಗಲೂ ನನ್ನ ತಾಯಿ ಊರಾದ ಹಿಂದುಪುರಪಲ್ಲಿಗೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಗಂಡ ಜಾಸ್ತಿ ತವರು ಮನೆಗೆ ಹೋಗಬೇಡ ಎಂದು ಹೇಳಿದಾಗ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಹೇದರಿಸುತ್ತಿದ್ದೆ ಎಂದರೆ ಸರಿಯಲ್ಲ. ದಿಃ 25.12.2009 ರಲ್ಲಿ ನಾನು ನನ್ನ ತಾಯಿ ಮನೆಗೆ ಹೋಗಿದ್ದೆ ಎಂದರೆ ಸರಿಯಲ್ಲ.

8. ನನ್ನ ತಾಯಿ ತಂದೆ ಮತ್ತು ಅತ್ತೆ ಮಾವನ ಮಾತು ಕೇಳಿಕೊಂಡು ನನ್ನ ಗಂಡನ ವಿರುದ್ಧ ಸಾಕಷ್ಟು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಗಂಡನೇ ಬಂದು ಗಲಾಟೆ ಮಾಡುತ್ತಿದ್ದ ಎಂದು ನುಡಿಯುತ್ತಾರೆ. ನನ್ನ ಗಂಡ ಮನೆಗೆ ಬಂದರು ನಾನು, ನನ್ನ ಅತ್ತೆ ಮಾವ ಜಗಳ ಮಾಡಿ ನನ್ನ ಗಂಡನನ್ನು ಮನೆಗೆ ಸೇರಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ದಿಃ 16.10.2022 ರಂದು ನಾನು ಸುಳ್ಳು ದೂರು ನೀಡಿದ್ದೆ ಎಂದರೆ ಸರಿಯಲ್ಲ. ಪೋಲೀಸರು ಬಿ ರೀಪೊರ್ಟ್ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

9. ನಾನು ಬೇರೆ ಉದ್ದೇಶವನ್ನು ಹೊಂದಿದ್ದು ನಾನು ತವರು ಮನೆಯಲ್ಲಿ ಇರಬೇಕೆಂದು ಎಂದು ಹಠ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಗಂಡ ಈಗಲೂ ನಮ್ಮ ಪಾಲನೆ ಪೋಷನೆ ಮಾಡಲು ಸಿದ್ದರಿದ್ದಾರೆ ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ಕೊಡಲು ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃಃ ಇಲ್ಲಾ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸ ಇದೆ

ಸಿಜೆ ಮತ್ತು ಜೆಎಂಎಫ್ ಸಿ. ,
ಬಾಗೇಪಲ್ಲಿ